ಶ್ರೀ ಆರ್. ವಿ. ದೇಶಪಾಂಡೆ.—ಇಷ್ಟು ಬೋರ್ಡ್ ಮತ್ತು ಕಾರ್ಪೊರೇಷನ್‌ಗಳಲ್ಲೂ ಕೇವಲ ನಾನ್ ಆಫಿಷಿಯಲ್ಸ್ ಮಾತ್ರ ಇಲ್ಲ, ಅಧಿಕಾರಿಗಳೂ ಇದ್ದಾರೆ. ಆದರೆ ನೀವು ಹೇಳುವ ರೀತಿಯಲ್ಲಿ ಈ ವಿಚಾರದಲ್ಲಿ ೧೮ ಪರ್ಸೆಂಟ್ ರೋಸ್ಟರ್‌ನ್ನು ಮುಂದಿಟ್ಟುಕೊಂಡು ಆದರ ಪ್ರಕಾರ ನಾವು ಮಾಡುತ್ತಾ ಹೋಗುವುದಕ್ಕಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ತಾವು ರೋಸ್ಟರ್‌ನ್ನು ಮೈಂಟೇನ್ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದೀರಿ. ೧೨೬ ಬೋರ್ಡ್ ಮತ್ತು ಕಾರ್ಪೊರೇಷನ್‌ಗಳ ಪೈಕಿ ೭೬ಕ್ಕೆ ನೀವು ಅಧಿಕಾರಿಗಳನ್ನು ನೇಮಕ ಮಾಡಿದ್ದೀರಿ. ತಮಗೆ ಧಾರಾಳತ್ವ ಇದ್ದಿದ್ದರೆ ಇವರೂ ಕೂಡ ಮುಂದೆ ಬರಲಿ, ಇವರಿಗೂ ಸೇವೆ ಸಲ್ಲಿಸಲು ಅವಕಾಶ ಕೊಡೋಣವೆಂದು ಹೆಚ್ಚಿನ ಪ್ರಾತಿನಿಧ್ಯವನ್ನು ಕೊಟ್ಟಿದ್ದರೆ ಇವರೂ ಮುಂದೆ ಬರುತ್ತಿದ್ದರು. ಆದರೆ ಯಾವ ಆಧಾರದ ಮೇಲೆ ಕೊಡಬೇಕು, ಯಾರಿಗೆ ಕೊಡಬೇಕು ಎಂಬುದು ತಮಗೆ ಸಂಬಂಧಪಟ್ಟಿದ್ದಲ್ಲದು. ಆದರ ಬಗ್ಗೆ ನಾನು ಏನೂ ಹೇಳುವುದಿಲ್ಲ. ಆದರೆ ನಿಮ್ಮ ನೀತಿ ಏನಾಗಿದೆ ಎಂದರೆ ಹೇಳುವುದೂ ಒಂದು, ಮಾಡುವುದೂ ಇನ್ನೊಂದೂ ಆಗಿದೆ. ಆದ್ದರಿಂದ ಇನ್ನು ಮುಂದಾದರೂ ಯಾವ ಯಾವ ವರ್ಗಕ್ಕೆ ಎಷ್ಟೆಷ್ಟು ಪ್ರಾತಿನಿಧ್ಯವನ್ನು ಕೊಡಬೇಕೆಂದು ನೋಡಿ ಕೊಡುತ್ತೀರಾ ?

ಶ್ರೀ ಆರ್. ವಿ. ದೇಶಪಾಂಡೆ —ನಾವು ಈಗಾಗಲೇ ಸಾಕಷ್ಟು ಪ್ರಾತಿನಿಧ್ಯವನ್ನು ಪರಿಶಿಷ್ಟ ವರ್ಗದವರಿಗೆ ಕೊಟ್ಟಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಸತ್ಯನಾರಾಯಣ, ರಾಯಣ್ಣನವರ್ ಮತ್ತು ಸೋಮಣ್ಣ ಎನ್ನುವ ಈ ೩ ಜನರನ್ನು ಬಿಟ್ಟರೆ ಬೇರೆ ಯಾರಿಗೆ ಕೊಟ್ಟಿದ್ದೀರಿ ?

ಶ್ರೀ ಆರ್. ವಿ ದೇಶಪಾಂಡೆ — ಬೋರ್ಡ್‌ನಲ್ಲಿ ಸದಸ್ಯತ್ವವನ್ನು ಕೊಡುವ ಮೂಲಕ ಸಾಕಷ್ಟು ಪ್ರಾತಿನಿಧ್ಯ ಸ್ಥಾನಮಾನವನ್ನು ಈ ವರ್ಗದವರಿಗೆ ಕೊಟ್ಟಿದ್ದೇವೆ. ಇನ್ನು ಮುಂದೆಯೂ ಸಾಕಷ್ಟು ಪ್ರಾತಿನಿಧ್ಯವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಹರಿಹರದಲ್ಲಿರುವ ಕೆ.ಎಸ್.ಆರ್.ಟಿ.ಸಿ. ಬಸ್ಸು ನಿಲ್ದಾಣವನ್ನು ನವೀಕರಿಸುವುದು.

೧೫೧೯. ಶ್ರೀ ಬಿ. ಜಿ ಕೊಟ್ರಪ್ಪ (ಹರಿಹರ).—ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :—

ಅ) ಹರಿಹರದ ಮೂಲಕ ೪ನೆಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಓಡಾಡುವ ವಾಹನಗಳು ಮತ್ತು ಬಳ್ಳಾರಿ–ಶಿವಮೊಗ್ಗ ಮೂಲಕ ಓಡಾಡುವ ವಾಹನಗಳು ಹೆಚ್ಚು ಸಂಖ್ಯೆಯಲ್ಲಿದ್ದು ಹೆಚ್ಚಿನ ಸಂಖ್ಯೆಯ ಬಸ್ಸುಗಳು ಹರಿಹರ ವಾಹನ ನಿಲ್ದಾಣಕ್ಕೆ ಬಂದು ಹೋಗುವುದು ಸರ್ಕಾರದವರ ಗಮನಕ್ಕೆ ಬಂದಿದ್ದರೂ ಸಹ ಹರಿಹರ ವಾಹನ ನಿಲ್ದಾಣವನ್ನು ದೊಡ್ಡದಾಗಿ ಮಾಡಿ ನವೀನ ರೀತಿಯಲ್ಲಿ ಕಟ್ಟಿಸಲು ತಾತ್ಸಾರ ಮಾಡಲು ಕಾರಣಗಳೇನು :

ಆ) ಹರಿಹರ ಬಸ್ಸು ನಿಲ್ದಾಣ, ರೈಲ್ವೆ ನಿಲ್ದಾಣ ಒಂದಕ್ಕೊಂದು ಹತ್ತಿರವಾಗಿದ್ದು ನೀರಿನ ಹಾಗೂ ದೀಪದ ಶೆಲ್ಟರುಗಳ ಅನುಕೂಲತೆ ಇಲ್ಲದಿರುವುದೂ ಸರ್ಕಾರದವರ ಗಮನಕ್ಕೆ ಬಂದಿದ್ದರೂ ಪರಿಹಾರ ಮಾಡಲು ಯಾವ ಕ್ರಮವನ್ನು ತೆಗೆದುಕೊಳ್ಳದೆ ಇರಲು ಕಾರಣವೇನು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು).—

ಅ) ಈ ಭಾಗವು ಪೂರ್ತಿ ರಾಷ್ಟ್ರೀಕರಣವಾಗದಿದ್ದುದರಿಂದ ಮಂತ್ರಿ ರಸ್ತೆ ಸಾರಿಗೆ ಸಂಸ್ಥೆಯು ಆರ್ಥಿಕ ಪರಿಸ್ಥಿತಿ ಸರಿಯಿಲ್ಲದಿರುವುದರಿಂದ ಹರಿಹರದಲ್ಲಿ ನವೀನ ರೀತಿಯ ವಾಹನ ನಿಲ್ದಾಣವನ್ನು ಮಾಡಲು ನಿರ್ಮಿಸಲು ಸಾಧ್ಯವಾಗಿಲ್ಲ.

ಆ) ಪುರಸಭೆಯಿಂದ ನೀರನ್ನು ಪಡೆದು ಸೌಲಭ್ಯ ಒದಗಿಸಲಾಗಿದೆ ಆವರಣಕ್ಕೆ ಹಲವಾರು ಟ್ಯೂಬ್ ಲೈಟುಗಳನ್ನು ಸಹ ಒದಗಿಸಲಾಗಿದೆ.

ಶ್ರೀ ಬಿ. ಜಿ. ಕೊಟ್ರಪ್ಪ.—ಸ್ವಾಮಿ, ೧೯೮೬–೮೭ನೇ ಸಾಲಿನಲ್ಲಿ ಹರಿಹರ ಬಸ್ ಸ್ಟ್ಯಾಂಡ್‌ನ್ನು ನವೀಕರಣ ಮಾಡುವುದಕ್ಕೆ ನಾನು ಕ್ರಮ ತೆಗೆದುಕೊಳ್ಳುತ್ತೇನೆಂದು ತಾವು ಭರವಸೆಯನ್ನು ಕೊಟ್ಟರೆ ಸಾಕು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ದಾವಣಗೆರೆಯಲ್ಲಿ ೫೦ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಹೊಸದಾಗಿ ಬಸ್‌ಸ್ಟ್ಯಾಂಡನ್ನು ಕಟ್ಟಿಸುತ್ತಿದ್ದೇವೆ. ಅದು ಇನ್ನೂ ಪೂರ್ಣವೇ ಆಗಿಲ್ಲ. ಅಂದ ಮೇಲೆ ಈಗ ಈ ಹರಿಹರ ಬಸ್‌ಸ್ಟ್ಯಾಂಡ್‌ನ್ನು ನವೀಕರಣ ಮಾಡಲು ಎಲ್ಲಿ ಸಾಧ್ಯವಾಗುತ್ತದೆ ? ದಾವಣಗೆರೆಯ ಬಸ್‌ಸ್ಟ್ಯಾಂಡ್ ಕೆಲಸ ಮುಗಿದ ಮೇಲೆ ಹರಿಹರದ್ದನ್ನು ನೋಡೋಣ.

ಬಿಜಾಪುರ ಜಿಲ್ಲೆಯ ಕಮಟಗಿ ಗ್ರಾಮದಲ್ಲಿ ಡಚ್ ಯೋಜನೆಯ ಅನ್ವಯ ಬಡ ನೇಕಾರರಿಗೆ ಮನೆ ಕಟ್ಟುವ ಬಗ್ಗೆ.

೧೭೨೧. ಶ್ರೀ ಎಸ್. ಜಿ. ನಂಜಯ್ಯನಮಠ್ (ಗುಳ್ಳೇದ ಗುಡ್ಡ).—ಮಾನ್ಯ ರಾಜ್ಯದ ಸಣ್ಣ ಕೈಗಾರಿಕಾ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯ ಕಮಟಗಿ ಗ್ರಾಮದಲ್ಲಿ 'ಡಚ್' ಯೋಜನೆಯನ್ವಯ ಮನೆ ಕಟ್ಟುವ ಯೋಜನೆ ಇದೆಯೇ?

ಆ) ಹಾಗಿದ್ದಲ್ಲಿ ಯಾವಾಗ ಈ ಕೆಲಸವನ್ನು ಪ್ರಾರಂಭಿಸಲಾಗುವುದು?

ಇ) ಈ ವರ್ಷವೇನಾದರೂ ಮಂಜೂರ್ಮಾಡಲಾಗುವುದೇ?

ಶ್ರೀ ಆರ್.ವಿ. ದೇಶಪಾಂಡೆ (ಸಣ್ಣ ಕೈಗಾರಿಕಾ ಸಚಿವರು).—

ಅ) ಡಚ್ ಯೋಜನೆಯು ಎರಡನೇ ಹಂತದಲ್ಲಿದೆ.

ಆ) ಯೋಜನೆಯನ್ನು ತಯಾರಿಸಲಾಗಿದ್ದು ಅದನ್ನು ಡಚ್ ಸರ್ಕಾರಕ್ಕೆ ಕಳುಹಿಸಿ ಅವರ ಒಪ್ಪಿಗೆಯನ್ನು ಪಡೆಯಬೇಕಾಗಿದೆ.

ಇ) ೧೯೮೬–೮೭ರಲ್ಲಿ ತೆಗೆದುಕೊಳ್ಳಬಹುದೆಂದು ನಿರೀಕ್ಷಿಸಲಾಗಿದೆ.

ಶ್ರೀ ಎಸ್.ಜಿ. ನಂಜಯ್ಯನಮಠ್.—ಸ್ವಾಮಿ, ಡಚ್ ಯೋಜನೆಯ ೨ನೇ ಹಂತಕ್ಕೆ ಸಂಬಂಧಪಟ್ಟಂತೆ ಸಮಿತಿ ಸಭೆ ಸೇರಿದೆಯೇ?

ಶ್ರೀ ಆರ್.ವಿ. ದೇಶಪಾಂಡೆ.—ಸೇರಿತ್ತು. ೭೪ ಮನೆಗಳನ್ನೂ ಒಂದು ಕಾಮನ್ ಪೆಡ್ಡನ್ನೂ ಕಟ್ಟಬೇಕೆಂದು ಅದು ತೀರ್ಮಾನಿಸಿದೆ.

ಶ್ರೀ ಎಸ್.ಜಿ. ನಂಜಯ್ಯನಮಠ್.—ಇದು ಈ ಯೋಜನೆಯಲ್ಲಿ ಸೇರಿದೆಯೆ?

ಶ್ರೀ ಆರ್.ವಿ. ದೇಶಪಾಂಡೆ.—ಹೌದು.

ಕೆ.ಜಿ.ಎಫ್. ನಗರಸಭೆ ಸಾರ್ವಜನಿಕ ಸೌಕರ್ಯಗಳನ್ನು ಒದಗಿಸುವ ಬಗ್ಗೆ,

೨೪೫. ಶ್ರೀ ಟಿ.ಎಸ್. ಮುನಿ(ಕೆ.ಜಿ ಎಫ್).—ಮಾನ್ಯ ನಗರಾಭಿವೃದ್ಧಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಜಿ.ಎಫ್.ನ ಈಗಿನ ಜನಸಂಖ್ಯೆ ಮತ್ತು ಸಾರ್ವಜನಿಕ ಸೌಕರ್ಯಗಳ ಅಭಿವೃದ್ಧಿಗೆ ಮತ್ತು ನಿರ್ವಹಣೆಗೆ ಕೆ.ಜಿ.ಎಫ್. ಮುನಿಸಿಪಾಲಿಟಿ ಖರ್ಚು ಮಾಡಿರುವ ಹಣವೆಷ್ಟು (ಅಭಿವೃದ್ಧಿ ಮತ್ತು ನಿರ್ವಹಣೆಗೆ ಪ್ರತ್ಯೇಕ ಅಂಕಿಗಳನ್ನು ಒದಗಿಸುವುದು)

ಆ) ಕಳೆದ ಎರಡು ಜನಗಣತಿಗಳಲ್ಲಿ ಜನಸಂಖ್ಯೆಯ ಹೆಚ್ಚಳವೆಷ್ಟು ಮತ್ತು ಕಳೆದ ೨ ದಶಕಗಳಲ್ಲಿ ಅಭಿವೃದ್ಧಿ ಕೆಲಸಗಳಿಗೆ ನಿಯೋಜಿಸಿದ ಹಣದ ಹೆಚ್ಚಳವೆಷ್ಟು?

ಇ) ಸಾರ್ವಜನಿಕ ಸೌಕರ್ಯಗಳ ಅಭಿವೃದ್ಧಿಗಾಗಿ ಹೆಚ್ಚು ಹಣವನ್ನು ಒದಗಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು?